ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 1 ಎಸ್‌ಎಂಆರ್ 2014

ಕರ್ನಾಟಕ ಸರ್ಕಾರ ಸಚಿವಾಲಯ
ವಿಧಾನ ಸೌಧ, ಬೆಂಗಳೂರು
ದಿನಾಂಕ: 02.04.2014.

# ಸುತ್ತೋಲೆ

ವಿಷಯ:- ವೈದ್ಯಕೀಯ ವೆಚ್ಚವನ್ನು ಮರುಪಾವತಿಸುವ ಪ್ರಸ್ತಾವನೆಗಳನ್ನು ಪರಿಶೀಲಿಸುವ ಬಗ್ಗೆ ಹಾಗೂ ಪ್ರಕರಣಗಳನ್ನು ಸಿಆಸು ಇಲಾಖೆ (ಸೇವಾನಿಯಮಗಳು)ಗೆ ಅಭಿಪ್ರಾಯ/ ಸಹಮತಿಗಾಗಿ ಕಳುಹಿಸುವ ಮುನ್ನ ಪಾಲಿಸಬೇಕಾದ ಸೂಚನೆಗಳ ಬಗ್ಗೆ.

ಉಲ್ಲೇಖ: 1) ಆದೇಶ ಸಂಖ್ಯೆ: ಸಿಆಸುಇ 34 ಎಸ್‌ಎಂಆರ್ 2011, ದಿನಾಂಕ: 28.09.2011
2) ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಆಇ 01 ಟಿಎಫ್‌ಪಿ 2012, ದಿನಾಂಕ: 20.01.2012

* * * * *

ಸರ್ಕಾರದಿಂದ ಮಾನ್ಯತೆ ಹೊಂದಿರುವ ಆಸ್ಪತ್ರೆಗಳಲ್ಲಿ ಪಡೆದ ವೈದ್ಯಕೀಯ ಚಿಕಿತ್ಸೆಯ ವೆಚ್ಚವನ್ನು ಮರುಪಾವತಿಸಲು ಹಾಗೂ ವೈದ್ಯಕೀಯ ಚಿಕಿತ್ಸೆಗಾಗಿ ಮುಂಗಡವನ್ನು ಮಂಜೂರು ಮಾಡಲು ಮತ್ತು ರೂ. ಒಂದು ಲಕ್ಷದವರೆಗಿನ ಮಾನ್ಯತೆ ಪಡೆಯದ ಖಾಸಗಿ ಆಸ್ಪತ್ರೆಗಳ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲು ಆಡಳಿತ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು ಅಧಿಕಾರವನ್ನು ಹೊಂದಿದ್ದರೂ ಸಹ ಪ್ರಸ್ತಾವನೆಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು)ಗೆ ಕಳುಹಿಸುತ್ತಿದ್ದು, ಇದರಿಂದ ವೈದ್ಯಕೀಯ ವೆಚ್ಚವನ್ನು ಮರುಪಾವತಿಸುವಲ್ಲಿ ವಿಳಂಬವಾಗುತ್ತಿರುತ್ತದೆ. ಅಲ್ಲದೇ ರಾಜ್ಯ ಸರ್ಕಾರಿ ನೌಕರರ ಚಿಕಿತ್ಸೆಗಾಗಿ ಮಾನ್ಯತೆ ಪಡೆಯದ ಆಸ್ಪತ್ರೆಗಳಲ್ಲಿ ಪಡೆದ ಚಿಕಿತ್ಸೆಯ ವೆಚ್ಚವನ್ನು ಮರುಪಾವತಿಸಲು ಇಲಾಖಾ ಮುಖ್ಯಸ್ಥರುಗಳಿಂದ ಹಾಗೂ ಸಚಿವಾಲಯದ ಇಲಾಖೆಗಳಿಂದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು)ಗೆ ಕಳುಹಿಸಲಾಗುತ್ತಿರುವ ಪ್ರಸ್ತಾವನೆಗಳಲ್ಲಿ ವೈದ್ಯಕೀಯ ವೆಚ್ಚ ಮರುಪಾವತಿಗೆ ಅವಶ್ಯವಿರುವ ಹಲವು ದಾಖಲೆಗಳಿಲ್ಲದೇ ಪ್ರಸ್ತಾವನೆಗಳನ್ನು ಸೇವಾನಿಯಮಗಳ ಅಭಿಪ್ರಾಯಕ್ಕಾಗಿ ಕಳುಹಿಸಲಾಗುತ್ತಿರುವುದನ್ನು ಗಮನಿಸಲಾಗಿದೆ.

2. ಆದುದರಿಂದ ವೈದ್ಯಕೀಯ ವೆಚ್ಚ ಮರುಪಾವತಿ ಪ್ರಕರಣಗಳಲ್ಲಿ **ಇದರೊಂದಿಗೆ ಲಗತ್ತಿಸಿರುವ ಚೆಕ್‌ಲಿಸ್ಟ್‌ನ ನಮೂನೆಯಲ್ಲಿ ತಿಳಿಸಿರುವ ವಿವರಗಳನ್ನು/ದಾಖಲೆಗಳನ್ನು ಪಡೆದು,** ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು, 1963ರ ನಿಯಮಗಳನ್ವಯ ಹಾಗೂ ಈ ಕೆಳಕಂಡ ಅಂಶಗಳನ್ವಯ ಪ್ರಕರಣಗಳನ್ನು ಪರಿಶೀಲಿಸಿ ಕ್ರಮ ಕೈಗೊಂಡು, ಈ ಕೆಳಗೆ ವಿವರಿಸಿದಂತೆ ಅವಶ್ಯಕವಿರುವಂತಹ ಪ್ರಕರಣಗಳನ್ನು ಮಾತ್ರ ಸಿ.ಆ.ಸು. ಇಲಾಖೆ (ಸೇವಾನಿಯಮಗಳು)ಗೆ ಅಭಿಪ್ರಾಯ/ ಸಹಮತಿಗಾಗಿ ಕಳುಹಿಸಿಕೊಡುವುದು:-

## (ಅ) ಸರ್ಕಾರದಿಂದ ಮಾನ್ಯತೆ ಪಡೆದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದ ಪ್ರಕರಣಗಳು:-

ಸರ್ಕಾರದಿಂದ ಮಾನ್ಯತೆ ಪಡೆದ ಆಸ್ಪತ್ರೆಗಳಲ್ಲಿ ಪಡೆದ ಚಿಕಿತ್ಸೆಯ ವೆಚ್ಚದಲ್ಲಿ ನಿಯಮಾನುಸಾರ ಸಿ.ಜಿ.ಹೆಚ್.ಎಸ್. ದರದನ್ವಯ ಲಭ್ಯವಾಗುವ ಅಥವಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ನಿರ್ದೇಶಕರು ನಿಗದಿಪಡಿಸುವ ಮೊತ್ತವನ್ನು ಮರುಪಾವತಿಸಲು ಇಲಾಖಾ ಮುಖ್ಯಸ್ಥರು ಹಾಗೂ ಇಲಾಖಾ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು ಆರ್ಥಿಕ ಇಲಾಖೆಯ ಅಧಿಕಾರ ಪ್ರತ್ಯಾಯೋಜನೆಯನ್ವಯ ಸಂಪೂರ್ಣ ಅಧಿಕಾರವನ್ನು ಹೊಂದಿದ್ದು, ಇಂತಹ ಪ್ರಕರಣಗಳಲ್ಲಿ ನಿಯಮ ಸಡಿಲಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಆದ್ದರಿಂದ ಇಂತಹ ಪ್ರಕಣಗಳಲ್ಲಿ ವೈದ್ಯಕೀಯ ವೆಚ್ಚ ಮರುಪಾವತಿಸಲು ಸೇವಾನಿಯಮದ ಅಭಿಪ್ರಾಯ/ಸಹಮತಿ ಪಡೆಯುವ ಅವಶ್ಯಕತೆಯಿರುವುದಿಲ್ಲ.

**(ಆ) <u>ಸರ್ಕಾರದಿಂದ ಮಾನ್ಯತೆ ಪಡೆಯದ ರಾಜ್ಯದ ಖಾಸಗಿ ಆಸ್ಪತ್ರೆಗಳಲ್ಲಿ ಪಡೆದ ಚಿಕಿತ್ಸೆಯ ವೆಚ್ಚ ಒಂದು ಲಕ್ಷ ರೂಪಾಯಿಗಳನ್ನು ಮೀರದ ಪ್ರಕರಣಗಳು:-</u>**

**ಸರ್ಕಾರದಿಂದ ಮಾನ್ಯತೆ ಪಡೆಯದ ಖಾಸಗಿ ಆಸ್ಪತ್ರೆಗಳಲ್ಲಿ ಹಾಗೂ ಹೊರ ರಾಜ್ಯದ ಆಸ್ಪತ್ರೆಗಳಲ್ಲಿ ಪಡೆದ ಚಿಕಿತ್ಸೆಯ ವೆಚ್ಚವನ್ನು ಮರುಪಾವತಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.** ತುರ್ತು/ಅನಿವಾರ್ಯ ಸಂದರ್ಭಗಳಲ್ಲಿ **ಮಾನ್ಯತೆ ಪಡೆಯದ ರಾಜ್ಯದ ಖಾಸಗಿ ಆಸ್ಪತ್ರೆಗಳಲ್ಲಿ** ಚಿಕಿತ್ಸೆ ಪಡೆದಂತಹ ಪ್ರಕರಣಗಳನ್ನು ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 34 ಎಸ್‌ಎಂಆರ್ 2011, ದಿನಾಂಕ: 28.09.2011 ರನ್ವಯ ಹಾಗೂ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಆಇ 01 ಟಿಎಫ್‌ಪಿ 2012, ದಿನಾಂಕ: 20.01.2012 ರನ್ವಯ ಪರಿಶೀಲಿಸಿ, ಈ ಆದೇಶಗಳಲ್ಲಿ ನಿಗದಿಪಡಿಸಿರುವ ಎಲ್ಲಾ ಷರತ್ತುಗಳನ್ನು ಪೂರೈಸಿರುವ ಬಗ್ಗೆ ಖಚಿತಪಡಿಸಿಕೊಂಡು, ಈ ಆದೇಶಗಳಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ನಿಯಮಗಳನ್ನು ಸಡಿಲಿಸಿ **ಆಡಳಿತ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಯವರುಗಳು ರೂ. 1.00 ಲಕ್ಷಗಳವರೆಗಿನ ಅರ್ಹತಾ ಮೊತ್ತದ** ಪ್ರಕರಣಗಳಲ್ಲಿ ವೈದ್ಯಕೀಯ ವೆಚ್ಚ ಮರುಪಾವತಿಗೆ ಕ್ರಮ ಕೈಗೊಳ್ಳುವುದು.

**(ಇ) <u>ಸರ್ಕಾರದಿಂದ ಮಾನ್ಯತೆ ಪಡೆಯದ ರಾಜ್ಯದ ಖಾಸಗಿ ಆಸ್ಪತ್ರೆಗಳಲ್ಲಿ ಪಡೆದ ಚಿಕಿತ್ಸೆಯ ವೆಚ್ಚ ಒಂದು ಲಕ್ಷ ರೂಪಾಯಿಗಳನ್ನು ಮೀರಿದ ಹಾಗೂ ಹೊರ ರಾಜ್ಯದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದ ಪ್ರಕರಣಗಳು:-</u>**

ಸರ್ಕಾರದಿಂದ ಮಾನ್ಯತೆ ಪಡೆಯದ ಖಾಸಗಿ ಆಸ್ಪತ್ರೆಯಲ್ಲಿ ಪಡೆದ ಚಿಕಿತ್ಸೆಯ ವೈದ್ಯಕೀಯ ವೆಚ್ಚಗಳ ಮರುಪಾವತಿ ಪ್ರಕರಣಗಳಲ್ಲಿ **ಮರುಪಾವತಿಸುವ ಅರ್ಹ ಮೊತ್ತವು ರೂ. 1.00 ಲಕ್ಷಗಳನ್ನು ಮೀರಿದ ಪ್ರಕರಣಗಳಲ್ಲಿ ಹಾಗೂ ಹೊರ ರಾಜ್ಯದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದ ಎಲ್ಲ ಪ್ರಕರಣಗಳಲ್ಲಿ,** ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 34 ಎಸ್‌ಎಂಆರ್ 2011, ದಿನಾಂಕ: 28.09.2011 ರಲ್ಲಿನ ಹಾಗೂ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಆಇ 01 ಟಿಎಫ್‌ಪಿ 2012, ದಿನಾಂಕ: 20.01.2012 ರಲ್ಲಿನ ಎಲ್ಲಾ ಷರತ್ತುಗಳನ್ನು ಪೂರೈಸಿರುವ ಬಗ್ಗೆ ಪರಿಶೀಲಿಸಿ, ಖಚಿತಪಡಿಸಿಕೊಂಡ ನಂತರ **ಆಡಳಿತ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಯವರ ಅನುಮೋದನೆ ಹಾಗೂ ಶಿಫಾರಸ್ಸಿನೊಂದಿಗೆ** ಪ್ರಸ್ತಾವನೆಯನ್ನು ಸಿ.ಆ.ಸು. ಇಲಾಖೆ (ಸೇವಾ ನಿಯಮಗಳು)ಯ ಅಭಿಪ್ರಾಯ/ ಸಹಮತಿಗಾಗಿ ಕಳುಹಿಸತಕ್ಕದ್ದು. **ಕ್ಷೇತ್ರ ಇಲಾಖೆಗಳು ಸಿ.ಆ.ಸು. ಇಲಾಖೆ (ಸೇವಾ ನಿಯಮಗಳು)ಗೆ ನೇರವಾಗಿ ಪ್ರಸ್ತಾವನೆಗಳನ್ನು ಕಳುಹಿಸತಕ್ಕದ್ದಲ್ಲ.**

**3) <u>ಚಿಕಿತ್ಸೆಗಾಗಿ ಮುಂಗಡ ಠೇವಣಿಯನ್ನು ಮಂಜೂರು ಮಾಡುವ ಬಗ್ಗೆ:-</u>**

**ಸರ್ಕಾರದಿಂದ ಮಾನ್ಯತೆ ಪಡೆದ ಆಸ್ಪತ್ರೆಗಳಲ್ಲಿ ಪಡೆಯುವ ಚಿಕಿತ್ಸೆಗಾಗಿ ಮಾತ್ರ ಮುಂಗಡ ಠೇವಣಿಯನ್ನು ಮಂಜೂರು ಮಾಡಲು** ಆರ್ಥಿಕ ಇಲಾಖೆಯು **ಗ್ರೂಪ್ ಎ ಮತ್ತು ಬಿ ಅಧಿಕಾರಿಗಳಿಗೆ** ಸಂಬಂಧಿಸಿದಂತೆ ಆದೇಶ ಸಂಖ್ಯೆ: ಆಇ 09 ಟಿಎಫ್‌ಪಿ 2009 (1), ದಿನಾಂಕ: 12.01.2010 ರಲ್ಲಿ ಹಾಗೂ **ಗ್ರೂಪ್ ಸಿ ಮತ್ತು ಡಿ ನೌಕರರುಗಳಿಗೆ** ಸಂಬಂಧಿಸಿದಂತೆ ಆದೇಶ ಸಂಖ್ಯೆ: ಆಇ 09 ಟಿಎಫ್‌ಪಿ 2009 (2), ದಿನಾಂಕ: 21.01.2010 ರಲ್ಲಿ ಅವಕಾಶವನ್ನು ಕಲ್ಪಿಸಿ, ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಕೇಂದ್ರ ಸರ್ಕಾರದ ಆರೋಗ್ಯ ಸೇವೆಗಳಡಿಯಲ್ಲಿ (CGHS) ಕಾಲಕಾಲಕ್ಕೆ ವಿವಿಧ ರೋಗ ನಿರ್ಣಯ ವಿಧಾನಗಳಿಗೆ ಮತ್ತು ಚಿಕಿತ್ಸೆಗಳಿಗೆ ನಿಗಧಿಪಡಿಸುವ ದರಗಳಂತೆ ಪಡೆಯುವ ಚಿಕಿತ್ಸೆಗಾಗಿ ಅಂತಿಮ ಬಿಲ್ಲಿನಲ್ಲಿ ಈ ಮುಂಗಡವನ್ನು ಮರುಹೊಂದಾಣಿಕೆ ಮಾಡಿಕೊಳ್ಳುವ ಷರತ್ತಿಗೊಳಪಡಿಸಿ ಮುಂಗಡ ಠೇವಣಿ ಪಾವತಿಗೆ ಮಂಜೂರಾತಿ ನೀಡಲು ಇಲಾಖಾ ಮುಖ್ಯಸ್ಥರುಗಳು ಹಾಗೂ ಇಲಾಖಾ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಿದ್ದು, ಈ ಆದೇಶಗಳನ್ವಯ ಪರಿಶೀಲಿಸಿ ವೈದ್ಯಕೀಯ ಚಿಕಿತ್ಸೆಗಾಗಿ ಮುಂಗಡ ಠೇವಣಿ ಮಂಜೂರು ಮಾಡಲು ಇಲಾಖಾ ಮುಖ್ಯಸ್ಥರುಗಳು ಹಾಗೂ ಇಲಾಖಾ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿಗಳು ಕ್ರಮ ಕೈಗೊಳ್ಳತಕ್ಕದ್ದು.

. . . . 3

4) ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು, 1963ರ ನಿಯಮ 2 ರನ್ವಯ ಸದರಿ ನಿಯಮಗಳು ರಾಜ್ಯ ಸರ್ಕಾರಿ ನೌಕರರಿಗೆ ಮಾತ್ರ ಅನ್ವಯವಾಗಲಿದ್ದು, ಸ್ವಾಯತ್ತ ಸಂಸ್ಥೆಗಳು/ಮಂಡಳಿಗಳು/ನಿಗಮಗಳು/ವಿಶ್ವವಿದ್ಯಾನಿಲಯಗಳು ಇತ್ಯಾದಿಗಳ ಸಿಬ್ಬಂದಿಗಳಿಗೆ, ನ್ಯಾಯಾಧೀಶರುಗಳಿಗೆ, ಭಾರತ ಸೇವೆಯ ಅಧಿಕಾರಿ/ನೌಕರರುಗಳಿಗೆ ಈ ನಿಯಮಗಳು ನೇರವಾಗಿ ಅನ್ವಯವಾಗುವುದಿಲ್ಲವಾದ್ದರಿಂದ ಇಂತಹ ಪ್ರಕರಣಗಳಲ್ಲಿ ಸಿ.ಆ.ಸು. ಇಲಾಖೆ (ಸೇವಾನಿಯಮಗಳು)ಯ ಅಭಿಪ್ರಾಯ/ಸಹಮತಿಯನ್ನು ಕೋರುವ ಅವಶ್ಯಕತೆಯಿರುವುದಿಲ್ಲ. ಇಂತಹ ಪ್ರಕರಣಗಳ ಬಗ್ಗೆ ಸಂಬಂಧಪಟ್ಟ ಆಡಳಿತ ಇಲಾಖೆಗಳೇ ಪರಿಶೀಲಿಸಿ ಕ್ರಮ ವಹಿಸಬೇಕಾಗಿರುತ್ತದೆ.

5) **ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು, 1963ರ ನಿಯಮಗಳಲ್ಲಿ ಹಾಗೂ ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಕೇಂದ್ರ ಸರ್ಕಾರದ ಆರೋಗ್ಯ ಸೇವೆಗಳಲ್ಲಿ (CGHS) ನಿಗಧಿಪಡಿಸದ ಚಿಕಿತ್ಸೆಗಳ ಪ್ರಕರಣಗಳಲ್ಲಿ** ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರ ಅಭಿಪ್ರಾಯವನ್ನು ಪಡೆದು ಹಾಗೂ ಅವಶ್ಯವಿದ್ದಲ್ಲಿ ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಕೇಂದ್ರ ಸರ್ಕಾರದ ಆರೋಗ್ಯ ಸೇವೆಗಳು (CGHS), ಬೆಂಗಳೂರು ಇವರ ಅಭಿಪ್ರಾಯವನ್ನೂ ಸಹ ಪಡೆದು ನಂತರ ಅಂತಹ ವೈದ್ಯಕೀಯ ವೆಚ್ಚ ಮರುಪಾವತಿ ಪ್ರಸ್ತಾವನೆಗಳನ್ನು ಸಚಿವಾಲಯದ ಆಡಳಿತ ಇಲಾಖೆಗಳ ಮೂಲಕ ಸಿ.ಆ.ಸು. ಇಲಾಖೆ (ಸೇವಾ ನಿಯಮಗಳು)ಯ ಅಭಿಪ್ರಾಯ/ ಸಹಮತಿಗಾಗಿ ಸಲ್ಲಿಸುವುದು.

ಮೇಲೆ ತಿಳಿಸಿರುವಂತೆ ವೈದ್ಯಕೀಯ ವೆಚ್ಚ ಮರುಪಾವತಿಯಲ್ಲಿ ಆಗುವ ವಿಳಂಬ ಹಾಗೂ ಅನವಶ್ಯಕ ಪತ್ರ ವ್ಯವಹಾರ ತಡೆಗಟ್ಟಲು ಕ್ರಮ ಕೈಗೊಳ್ಳುವಂತೆ ಎಲ್ಲ ಸಂಬಂಧಿತ ಪ್ರಾಧಿಕಾರಗಳಿಗೆ ಈ ಮೂಲಕ ತಿಳಿಸಲಾಗಿದೆ.

**(ರಾಜೀವ್ ಕುಮಾರ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

**ಇವರಿಗೆ:**

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.
2. ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿ,ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು
3. ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
4. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು
5. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ಪರಿಷತ್ತು, ವಿಧಾನ ಸೌಧ, ಬೆಂಗಳೂರು
6. ನಿವಾಸಿ ಆಯುಕ್ತರು, ಕರ್ನಾಟಕ ಭವನ, ಕೌಟಿಲ್ಯ ಮಾರ್ಗ್, ಚಾಣಕ್ಯಪುರಿ, ನವದೆಹಲಿ-110 011
7. ಎಲ್ಲಾ ಇಲಾಖಾ ಮುಖ್ಯಸ್ಥರು
8. ಎಲ್ಲಾ ಪ್ರಾದೇಶಿಕ ಆಯುಕ್ತರು
9. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು/ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್
10. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು-560 009
11. ಮಹಾ ನಿಬಂಧಕರು, ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು
12. ನಿಬಂಧಕರು, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಕಂದಾಯ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009
13. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು
14. ನಿಬಂಧಕರು, ಕರ್ನಾಟಕ ಮೇಲ್ಮನವಿ ಪ್ರಾಧಿಕಾರ, ಬೆಂಗಳೂರು
15. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು
16. ಸರ್ಕಾರದ ಎಲ್ಲಾ ಅಪರ/ಜಂಟಿ/ಉಪ/ಅಧೀನ ಕಾರ್ಯದರ್ಶಿಗಳು
17. ಶಾಖಾ ರಕ್ಷಾ ಕಡತ/ಬಿಡಿ ಪ್ರತಿಗಳು

<u>ವೈದ್ಯಕೀಯ ವೆಚ್ಚವನ್ನು ಮರುಪಾವತಿಸುವ ಸಂಬಂಧದ ಚೆಕ್‌ಲಿಸ್ಟ್</u>

| ಕ್ರ. ಸಂ. | ಪರಿಶೀಲಿಸಬೇಕಾದ ಅಂಶಗಳು | ಷರಾ |
|---|---|---|
| 1 | ಅಧಿಕಾರಿ/ನೌಕರರ ಹೆಸರು:<br>ಹುದ್ದೆ:<br>ಇಲಾಖೆ: | |
| 2 | ಚಿಕಿತ್ಸೆ ಪಡೆದವರ ಹೆಸರು,<br>ವಯಸ್ಸು ಹಾಗೂ ಸಂಬಂಧ | |
| 3 | ಚಿಕಿತ್ಸೆ ಪಡೆದ ಆಸ್ಪತ್ರೆಯ/ಗಳ ಹೆಸರು,<br>ವಿಳಾಸ | |
| 4 | ಆಸ್ಪತ್ರೆಯು ವೈದ್ಯಕೀಯ ವೆಚ್ಚ ಮರುಪಾವತಿ ಉದ್ದೇಶಕ್ಕಾಗಿ ಸರ್ಕಾರದಿಂದ ಮಾನ್ಯತೆ ಪಡೆದಿದೆಯೇ? | |
| 5 | ಖಾಯಿಲೆಯ ಹೆಸರು | |
| 6 | ಒಳರೋಗಿ/ಹೊರರೋಗಿಯಾಗಿ ಚಿಕಿತ್ಸೆ<br>ಪಡೆದ ಅವಧಿ | |
| 7 | **Discharge Summary** ಪಡೆಯಲಾಗಿದೆಯೇ? | |
| 8 | ಮಾನ್ಯತೆ ಪಡೆಯದ ಖಾಸಗಿ ಆಸ್ಪತ್ರೆ/ ಹೊರರಾಜ್ಯದ ಆಸ್ಪತ್ರೆಯಲ್ಲಿ ಪಡೆದ ಚಿಕಿತ್ಸೆಗೆ ಅಧಿಕಾರಿ/ನೌಕರರ ವಿವರಣೆ. | |
| 9 | ಅವಲಂಬಿತ ತಂದೆ/ತಾಯಿಯ ಆದಾಯದ ಬಗ್ಗೆ ಆದಾಯ ಪ್ರಮಾಣಪತ್ರ/ದಾಖಲೆ ಹಾಗೂ ಸರ್ಕಾರಿ ನೌಕರರ ಜೊತೆಯಲ್ಲಿ ವಾಸವಾಗಿರುವ ಕುರಿತು ದಾಖಲೆ. | |
| 10 | ಅವಲಂಬಿತರು ಸರ್ಕಾರಿ ನೌಕರರನ್ನು ಅವಲಂಬಿಸಿರುವ ಬಗ್ಗೆ ಪ್ರಮಾಣಪತ್ರ. | |
| 11 | ಪತಿ/ಪತ್ನಿ ಇಬ್ಬರೂ ಸರ್ಕಾರಿ ನೌಕರರಾಗಿದ್ದಲ್ಲಿ, ಅರ್ಜಿದಾರರಲ್ಲದ ನೌಕರರು ವೈದ್ಯಕೀಯ ವೆಚ್ಚ ಮರುಪಾವತಿ ಪಡೆಯದ ಬಗ್ಗೆ ಸಂಬಂಧಪಟ್ಟ ಕಛೇರಿಯಿಂದ ಪಡೆದ ಪ್ರಮಾಣಪತ್ರ. | |
| 12 | ನಿಗಧಿತ ಅವಧಿಯಲ್ಲಿ ಅರ್ಜಿಯನ್ನು ಸಲ್ಲಿಸಿರುವ ಬಗ್ಗೆ ಮಾಹಿತಿ ಅಥವಾ ವಿಳಂಬವಾಗಿ ಸಲ್ಲಿಸಿದ್ದಲ್ಲಿ ಆಡಳಿತ ಇಲಾಖೆಯು ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 146 (ಎ) ರನ್ವಯ ವಿಳಂಬ ಮನ್ನಾ ಮಾಡಿ ಹೊರಡಿಸಲಾಗಿರುವ ಆದೇಶದ ಬಗ್ಗೆ ಮಾಹಿತಿ. | |
| 13 | ವಿಮಾ ಸಂಸ್ಥೆ, ಇತ್ಯಾದಿ ಯಾವುದೇ ಇತರ ಮೂಲಗಳಿಂದ ವೈದ್ಯಕೀಯ ವೆಚ್ಚ ಹಿಂಪಡೆದಿಲ್ಲವೆಂಬ ಬಗ್ಗೆ ಪ್ರಮಾಣ ಪತ್ರ. | |
| 14 | ಭಾಗ್ಯಜ್ಯೋತಿ/ಇತರೆ ಯೋಜನೆಗಳಿಂದ ಮರುಪಾವತಿ ಪಡೆಯಲಾಗಿದೆಯೇ? | |
| 14 | ಚಿಕಿತ್ಸೆಗೆ ಮುಂಗಡ ಮಂಜೂರು ಮಾಡಿರುವ/ ಮಾಡದಿರುವ ಬಗ್ಗೆ ಮಾಹಿತಿ. | |
| 15 | ಚಿಕಿತ್ಸೆಗೆ ತಗುಲಿದ ಒಟ್ಟು ವೆಚ್ಚ | |
| 16 | ನಿರ್ದೇಶಕರು, ಆಕುಕ ಸೇವೆಗಳು, ಬೆಂಗಳೂರು ಇವರು ಅಭಿಪ್ರಾಯ ನೀಡಿದ ಪತ್ರ ಹಾಗೂ ಈ ಪತ್ರದಲ್ಲಿ ತಿಳಿಸಿದ ಅರ್ಹತಾ ಮೊತ್ತ | |